# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No. 1 | Issue : 273 | Pages .02 | Date : 18.09.2025 THURSDAY | RNI NO.KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 273 – ಪುಟಗಳು : 02 18.09.2025 ಗುರುವಾರ | Ph : 8762954248 | ದರ : ₹1


# ಮಹಾನಗರ ಪಾಲಿಕೆಗೆ ಗಿರೀಶ್ ಚನ್ನವೀರಪ್ಪ ಮೇಯರ್

## ಪ್ರಕ್ರಿಯೆಯಿಂದ ದೂರ ಉಳಿದ ಬಿಜೆಪಿ । ಜೆಡಿಎಸ್ ಮೇಲುಗೈ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಿರೀಕ್ಷೆಯಂತೆ ಮಹಾನಗರ ಪಾಲಿಕೆ ಮೇಯರ್ ಆಗಿ 8ನೇ ವಾರ್ಡ್ ಸದಸ್ಯ ಗಿರೀಶ್ ಚನ್ನವೀರಪ್ಪ ಅವಿರೋಧ ಆಯ್ಕೆಯಾಗಿದ್ದಾರೆ.

ಬುಧವಾರ ನಡೆದ ಚುನಾವಣೆಯಲ್ಲಿ ಗಿರೀಶ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು. ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಮೈಸೂರು ಪ್ರಭಾರ ಪ್ರಾದೇಶಿಕ ಆಯುಕ್ತ ವೆಂಕಟರಾಜ ಅವರು, ಮಧ್ಯಾಹ್ನ 1.30ರ ನಂತರ ಅವರೋಧ ಆಯ್ಕೆ ಘೋಷಿಸಿದರು.

ನೂತನ ಮೇಯರ್ ಅವರನ್ನು ಶಾಸಕ ಹೆಚ್.ಪಿ. ಸ್ವರೂಪ್, ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ, ಉಪ ಮೇಯರ್ ಹೇಮಲತಾ, ಜೆಡಿಎಸ್ ಸದಸ್ಯರು ಹಾಗೂ ಅವರ ಕುಟುಂಬ ಸದಸ್ಯರು ಅಭಿನಂದಿಸಿದರು.

ಈ ಹಿಂದೆ ಮೇಯರ್ ಆಗಿದ್ದ ಎಂ.ಚಂದ್ರೇಗೌಡ ಅವರ ಸದಸ್ಯತ್ವ ಅನರ್ಹಗೊಂಡ ನಂತರ ಖಾಲಿ ಇದ್ದ ಸ್ಥಾನಕ್ಕೆ ಈ ಮೊದಲು ಸೆ.10ರಂದು ಚುನಾವಣೆ ನಿಗದಿಯಾಗಿ–ತ್ತು. ಆದರೆ ಮೈಸೂರು ಪ್ರಾದೇಶಿಕ ಆಯುಕ್ತರು ವರ್ಗಾವಣೆಯಾದ ಹಿನ್ನೆಲೆಯಲ್ಲಿ ಮುಂದೂಡಿಕೆಯಾಗಿತ್ತು.

**ಅಂತರ ಕಾಯ್ದುಕೊಂಡ ಬಿಜೆಪಿ:**

ಮೇಯರ್ ಚುನಾವಣೆಯಿಂದ ಬಿಜೆಪಿ ಹೊರಗುಳಿಯಿತು. ಕಮಲ ಪಕ್ಷದ ಯಾವುದೇ ಸದಸ್ಯರು ಸಭೆಗೆ ಆಗಮಿಸಿರಲಿಲ್ಲ. ಚಂದ್ರೇಗೌಡ ಅನರ್ಹತೆಯಿಂದ ಪಾಲಿಕೆ ಒಟ್ಟು ಸದಸ್ಯ ಬಲ 34ಕ್ಕೆ ಕುಸಿದಿದ್ದು, ಜೆಡಿಎಸ್ 16, ಬಿಜೆಪಿ 13, ಪಕ್ಷೇತರ 03 ಹಾಗೂ ಕಾಂಗ್ರೆಸ್‌ನ ಇಬ್ಬರು ಸದಸ್ಯ–ರಿದ್ದು, ಇತರರ ಬೆಂಬಲ ಪಡೆದು ಬಿಜೆಪಿಯೂ ಸ್ಪರ್ಧಾ ಅಖಾಡಕ್ಕೆ ಧುಮುಕಬಹುದು ಎನ್ನಲಾಗಿತ್ತು. ಆದರೆ ಆ ರೀತಿಯ ಯಾವುದೇ ಬೆಳವಣಿಗೆ ಆಗಲಿಲ್ಲ. ಬಿಜೆಪಿ ಸದಸ್ಯರು ತಟಸ್ಥರಾಗಿದ್ದರು.



### ಪ್ರಾಮಾಣಿಕ ಕೆಲಸ

ನೂತನ ಮೇಯರ್ ಗಿರೀಶ್ ಮಾತನಾಡಿ, ಪಕ್ಷ ನಾಯಕರ ಸೂಚನೆಯಂತೆ ಮೇಯರ್ ಆಗಿ ಅವಿರೋಧ ಆಯ್ಕೆಯಾಗಿದ್ದೇನೆ. ಇದಕ್ಕೆ ಸಹಕಾರ ನೀಡಿದ ಮಾಜಿ ಸಚಿವ ಎಚ್.ಡಿ. ರೇವಣ್ಣ, ಶಾಸಕ ಸ್ವರೂಪ್ ಪ್ರಕಾಶ್, ಎಂಎಲ್‌ಸಿ ಸೂರಜ್ ರೇವಣ್ಣ ಸೇರಿದಂತೆ ಹಾಸನ ಜನತೆಗೆ ವಿಶೇಷವಾಗಿ, ನನ್ನನ್ನು ಗೆಲ್ಲಿಸಿರುವ 8ನೇ ವಾರ್ಡ್ ಜನತೆಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಪಾಲಿಕೆಯಲ್ಲಿ ಏನೆಲ್ಲ ಕೆಲಸ ಮಾಡಬೇಕು ಎಂಬ ಬಗ್ಗೆ ನನ್ನದೇ ಆದ ಕನಸುಗಳಿವೆ. ಪಕ್ಷದ ನಾಯಕರು, ಶಾಸಕರು ಹಾಗೂ ಸದಸ್ಯರ ವಿಶ್ವಾಸ ಪಡೆದು ಅಭಿವೃದ್ಧಿ ಕಾಮಗಾರಿ ಮಾಡುವೆ, ಜನರಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ ಎಂದರು.

**ಪ್ರೀತಂ ವಿರುದ್ಧ ಅಸಮಾಧಾನ:**

ಈ ವೇಳೆ ಮಾತನಾಡಿದ ಎಂಎಲ್‌ಸಿ ಡಾ. ಸೂರಜ್ ರೇವಣ್ಣ, ಇಂದು ಒಮ್ಮತವಾಗಿ ಮೇಯರ್ ಚುನಾವಣೆ ನಡೆದಿದೆ. ನೂತನ ಮೇಯರ್‌ಗೆ ಅಭಿನಂದನೆಗಳು, ಉತ್ತಮ ಕೆಲಸ ಮಾಡಲಿ ಎಂದರು. ಎಂ.ಚಂದ್ರೇಗೌಡ ಅವರ ಬಗ್ಗೆ ನಮಗೆ ಸಿಟ್ಟಿಲ್ಲ. ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದರಿಂದ ಅವರ ವಿರುದ್ಧ ಕೋರ್ಟ್‌ಗೆ ಹೋಗ ಬೇಕಾಯಿತು.ರಾಷ್ಟ್ರದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಯಾಗಿದ್ದರೂ ಸ್ಥಳೀಯವಾಗಿ ಒಮ್ಮತವಾಗಿ ಸಾಧ್ಯವಾಗಿಲ್ಲ. ಇದನ್ನು ಮಾಜಿ ಶಾಸಕರು ಅರಿಯಬೇಕು. ಸಭೆ, ಸಮಾರಂಭಗಳಲ್ಲಿ ಸಂಸದರು ಸಹ ಮಾಜಿ ಶಾಸಕರೊಂದಿಗೆ ಕುಣಿದು ಕುಪ್ಪಳಿಸುತ್ತಾರೆ. ಇದು ಪವಿತ್ರ ಮೈತ್ರಿಯೋ ಅಪವಿತ್ರ ಮೈತ್ರಿಯೋ ಎಂಬುದನ್ನು ಜನರೇ ನಿರ್ಧರಿಸಲಿ ಎಂದು ಪರೋಕ್ಷವಾಗಿ ಮಾಜಿ ಶಾಸಕ ಪ್ರೀತಂಗೌಡ– ಸಂಸದ ಶ್ರೇಯಸ್ ಪಟೇಲ್ ನಡೆಗೆ ಕಿರಿ ಕಾರಿದರು.

ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ನಮ ತಂದೆ ಶಾಸಕರಾಗಿದ್ದಾಗ ಹಿರಿಯರಾದ ಚನ್ನವೀರಪ್ಪ ನಗರಸಭೆ ಅಧ್ಯಕ್ಷರಾಗಿದ್ದರು. ಅವರು ಹಲವು ಉತ್ತಮ ಕೆಲಸ ಮಾಡಿದ್ದರು. ಈಗ ಅವರ ಪುತ್ರ ಗಿರೀಶ್ ಅಧ್ಯಕ್ಷರಾಗಿದ್ದಾರೆ. ನಮೆಲ್ಲರಿಗೂ ಸಂತೋಷ ತಂದಿದೆ. ಅವರೂ ಕೂಡ ನಗರದ ಜನರ ಪರವಾಗಿ ಕೆಲಸ ಮಾಡಲಿ.

> ರಾಷ್ಟ್ರ ಮಟ್ಟದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಯಾಗಿದ್ದರೂ ಸ್ಥಳೀಯವಾಗಿ ಆ ಪರಿಸ್ಥಿತಿ ಇಲ್ಲ. ಈ ವಿಚಾರವನ್ನು ಬಿಜೆಪಿ ರಾಜ್ಯಾಧ್ಯಕ್ಷರ ಗಮನಕ್ಕೆ ತರಲಾಗಿದೆ. ಮುಂದೆ ಏನು ಮಾಡುತ್ತಾರೆ ಕಾದು ನೋಡೋಣ.
>
> –ಡಾ. ಸೂರಜ್ ರೇವಣ್ಣ, ಎಂಎಲ್‌ಸಿ

ಹಿಂದೆ ಚಂದ್ರೇಗೌಡರನ್ನು ಅಧ್ಯಕ್ಷರನ್ನಾಗಿ ಮಾಡಿದ್ದು ಇದೇ ಜೆಡಿಎಸ್ ಪಕ್ಷ, ಆ ಬಿಜೆಪಿ ಸದಸ್ಯರಿಗೆ ಉಪಾಧ್ಯಕ್ಷ ಸ್ಥಾನ ನೀಡಿದ್ದೆವು. ಆದರೆ ಅವರು ಒಪ್ಪಂದದಂತೆ ಅಧಿಕಾರ ಬಿಟ್ಟು ಕೊಡದೇ ಇದ್ದಾಗ ಅವಿಶ್ವಾಸ ನಿರ್ಣಯ ಮಂಡಿಸಿದ್ದೆವು.

ಆಗ ಅವರು ಬಿಜೆಪಿ–ಕಾಂಗ್ರೆಸ್ ಸಹಕಾರ ಪಡೆದು ಮೇಯರ್ ಆಗುವ ಮೂಲಕ ಪಕ್ಷ ವಿರೋಧಿ ಚಟುವಟಿ–ಕೆ ನಡೆಸಿದ್ದರು.ಇದರ ವಿರುದ್ಧ ನಾವು ಕೋರ್ಟ್ ಮೊರೆ ಹೋದಾಗ ನಮಗೆ ನ್ಯಾಯ ಸಿಕ್ಕಿತ್ತು.

ಇಂದು ನಡೆದ ಚುನಾವಣೆಯಲ್ಲಿ ಆ ರೀತಿಯ ಯಾವುದೇ ಪಕ್ಷ ವಿರೋಧಿ ಚಟುವಟಿಕೆ ನಡೆಯಲಿಲ್ಲ.

ಆದರೆ ಬಿಜೆಪಿಯವರು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲಿಲ್ಲ ಎಂದರು.

# ವಿಶ್ವಕರ್ಮರು ಹಾಕಿಕೊಟ್ಟ ಮಾರ್ಗದಲ್ಲಿ ಎಲ್ಲರೂ ಸಾಗೋಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ದೇವಾನು ದೇವತೆಗಳ ಅನುಗ್ರಹದಿಂದ ವಿಶ್ವಕರ್ಮರು ಅಗಾಧ ಸಾಧನೆ ಮೆರೆದಿದ್ದಾರೆ. ರಾಷ್ಟ್ರ ನಿರ್ಮಾಣದಲ್ಲಿ ವಿಶ್ವ ಕರ್ಮರು ವಹಿಸಿದ ಪಾತ್ರ ಅತ್ಯಮೂಲ್ಯವಾಗಿದ್ದು ಅವರು ಹಾಕಿಕೊಟ್ಟ ಮಾರ್ಗದಲ್ಲಿ ಯುವ ಸಮಾಜ ಸಾಗಬೇಕಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಬುಧವಾರ ಆಯೋಜಿಸಿದ್ದ ವಿಶ್ವಕರ್ಮ ಜಯಂತಿ ಉದ್ಘಾಟಿಸಿ ಮಾತನಾಡಿ, ವಿಶ್ವಕರ್ಮರನ್ನು ಪ್ರಪಂಚದ ಶ್ರೇಷ್ಠ ದೇವರಿಗೆ ಹೋಲಿಸಲಾಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ಕ್ಷೇತ್ರ ಅಭಿವೃದ್ಧಿ ದೃಷ್ಟಿಯಿಂದ ಸರ್ಕಾರ 25 ಕೋಟಿ ರೂ. ಅನುದಾನ ನೀಡಿದೆ. ಅದರಲ್ಲಿ ಮೊದಲು ವಿಶ್ವಕರ್ಮ ಸಮುದಾಯದ ಮಕ್ಕಳಿಗೆ ಅನುಕೂಲವಾಗುವ ದೃಷ್ಟಿಯಿಂದ ವಸತಿ ನಿಲಯ ಹಾಗೂ ಸಮುದಾಯ ಭವನ ನಿರ್ಮಾಣಕ್ಕೆ 25 ಲಕ್ಷ ರೂ. ನೀಡುತ್ತೇನೆ. ಈಗಾಗಲೇ ಜಕಣಾಚಾರಿ ವೃತ್ತ ಎಂದು ರಸ್ತೆಗೆ ನಾಮಕರಣ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಅವರ ಪ್ರತಿಮೆಗೆ ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ಜಗತ್ತಿಗೆ ರೂಪ ಕೊಟ್ಟವರು ವಿಶ್ವಕರ್ಮ ಸಮುದಾಯದವರು. ಇಂದು ಜಗತ್ತನ್ನು ಸುಂದ–ರೀಕರಣ ಮಾಡುವ ದೈವಿಕಲೆ ಹೊಂದಿರುವ ಮಹಾನುಭಾವರ ಹೆಸರಿನಲ್ಲಿ ಜಯಂತಿ ಆಚ–ರಿಸುತ್ತಿರುವುದು ಹೆಮ್ಮೆಯ ವಿಚಾರವೆಂದರು.

ನಮ ನೆಲದ ಸಂಸ್ಕೃತಿ, ಪ್ರಪಂಚದ ಸೌಂದರ್ಯ ಸುಂದರವಾಗಿರಲು ವಿಶ್ವಕರ್ಮ ಸಮಾಜದವರು ಕಾರಣ–ಕರ್ತರಾಗಿದ್ದಾರೆ. ಈ ಸಮುದಾಯದವರ ಕೊಡುಗೆ ಅಪಾರವಾಗಿದೆ. ಇಂದು ವಿಶ್ವಕರ್ಮ ಜಯಂತಿ ಒಂದು ಸಮುದಾಯಕ್ಕೆ ಮಾತ್ರ ಸೀಮಿತವಲ್ಲ. ಇಡೀ ಪ್ರಪಂಚಕ್ಕೆ ಅವರ ಕೊಡುಗೆ ಬಹಳಷ್ಟಿದೆ ಎಂದರು.

ಸಮುದಾಯದ ಶ್ರೀ ಶಿವಚಂದ್ರಶೇಖರ ಸ್ವಾಮೀಜಿ ಮಾತನಾಡಿ, ಬಹಳ ಶ್ರೇಷ್ಠ ಹಾಗು ವಿಶೇಷವಾದದ್ದು ವಿಶ್ವಕರ್ಮದವರು ಮಾಡುವ ಕೆಲಸ. ಜೊತೆಗೆ ಶ್ರೇಷ್ಠ ಮನುಷ್ಯ ಜನವನ್ನು ಭಗವಂತ ನಮಗೆ ನೀಡಿದ್ದಾನೆ. ಹಾಗಾಗಿ ನಾವೆಲ್ಲರೂ ಅತಃಕರಣ ಶುದ್ಧಿ ಮಾಡಿಕೊಂಡು ಮಹನೀಯರ ದಾರಿಯಲ್ಲಿ ನಡೆಯಬೇಕೆಂದು ತಿಳಿಸಿದರು.

ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಮಾತನಾಡಿ, ಕರ್ಮ ಎಂದರೆ ಕೆಲಸ. ಹಾಗಾಗಿ ಇಡೀ ವಿಶ್ವದ ಕೆಲಸ ಮಾಡುತ್ತಿರುವವರು ವಿಶ್ವಕರ್ಮ ಸಮುದಾಯದವರಾಗಿದ್ದಾರೆ. ಯಾವುದೇ ಅಪೇಕ್ಷೆ ಇಲ್ಲದೆ, ಸ್ವಾರ್ಥವಿಲ್ಲದೆ ವಿಶ್ವವನ್ನು ಸುಂದರಗೊಳಿಸುವ, ಯಾವ ವಸ್ತು ಸಿಕ್ಕರು ಅದಕ್ಕೆ ಸೌಂದರ್ಯ ಸ್ಪರ್ಶ ಕಲ್ಪಿಸುವ ವಿಶೇಷ ಗುಣ ಅವರಲ್ಲಿದೆ ಎಂದರು.

ಹಳೇಬೀಡು, ಬೇಲೂರು ದೇವಾಲಯ ನಿರ್ಮಿಸಿದ ಜಕಣಾಚಾರಿ ಮಹಾನುಭಾವರಾಗಿದ್ದಾರೆ. ಅವರ ರೀತಿಯಲ್ಲಿ ಕೆಲಸ ಮಾಡುವುದೇ ಶಾಶ್ವತವಾಗಿ ಉಳಿಯುವಂತೆ ಮಾಡುತ್ತದೆ. ಭವಿಷ್ಯದ ಪೀಳಿಗೆಗೂ ಪರಂಪರಾಗತವಾಗಿ ಬಂದಿರುವ ಕಲೆಯನ್ನು ಉಳಿಸಿ ಕೊಡಬೇಕೆಂದು ಸಲಹೆ ನೀಡಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ. ಕೃಷ್ಣೇಗೌಡ ಅವರು ಮಾತನಾಡಿ, ಮಹಾಭಾರತ, ಪೌರಾಣಿಕ ಕಾಲದಿಂದಲೂ ಎಲ್ಲಾ ಮಠಗಳಿಗೆ ಶಿಲ್ಪಗಳನ್ನು ಕೆತ್ತನೆ ಮಾಡಿಕೊಟ್ಟವರು ವಿಶ್ವಕರ್ಮ ಸಮಾಜದವರು. ರೈತರಿಗೆ ನೇಗಿಲ ಸೃಷ್ಟಿ ಮಾಡಿಕೊಟ್ಟು ಅನ್ನದಾತರಾದವರು ವಿಶ್ವಕರ್ಮ ಸಮಾಜದವರು ಎಂದರು.

ವಿಶ್ವಕರ್ಮ ಜಯಂತಿ ಅಂಗವಾಗಿ ನಗರದ ಜಿಲ್ಲಾಧಿಕಾರಿ ಕಚೇರಿಯಿಂದ ಹಾಸನಾಂಬ ಕಲಾಕ್ಷೇತ್ರ ವರೆಗೆ ಏರ್ಪಡಿಸಿದ್ದ ಭವ್ಯ ಮೆರವಣಿಗೆಗೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಚಾಲನೆ ನೀಡಿದರು.

ಹೆಚ್ಚುವರಿ ಪೊಲೀಸ್ ವ–ರಿಷ್ಠಾಧಿಕಾರಿ ವೆಂಕಟೇಶ್ ನಾಯ್ದು, ಕನ್ನಡ ಮತ್ತು ಸಂಸ್ಕೃತಿಇಲಾಖೆ ಸಹಾಯಕ ನಿರ್ದೇಶಕ ಡಾ. ಹೆಚ್.ಪಿ. ತಾರಾನಾಥ್, ವಿಶ್ವಕರ್ಮ ಸಮಾಜ ಜಿಲ್ಲಾಧ್ಯಕ್ಷ ಹೆಚ್.ವಿ. ಹರೀಶ್ ಇತರರಿದ್ದರು.

# ಮೃತರ ಕುಟುಂಬಕ್ಕೆ ಸಂಸದರ ನೆರವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲ್ಲೂಕಿನ ಮೊಸಳೆಹೊಸಳ್ಳಿಯಲ್ಲಿ ಇತ್ತೀಚೆಗೆ ಸಂಭವಿಸಿದ ಕ್ಯಾಂಟ–ರ್ ದುರಂತದಲ್ಲಿ ಮೃತರ ಕುಟುಂಬಸ್ಥರಿಗೆ ಸಂಸದ ಶ್ರೇಯಸ್ ಪಟೇಲ್ ಅವರು ತಲಾ 1 ಲಕ್ಷ ರೂ. ಪರಿಹಾರ ವಿತರಿಸಿದರು.

ಕಟ್ಟಾಯ ಹೋಬಳಿ ಶಿವಯ್ಯನಕೊಪ್ಪಲು ಗ್ರಾಮದ ಚಂದನ್, ಹೊಳೆನರಸೀಪುರ ತಾಲ್ಲೂಕು ಬಂಟರಹಳ್ಳಿಯ ಪ್ರಭಾಕರ್ ಅವರ ಮನೆಗೆ ತೆರಳಿ ಸಾಂತ್ವನ ಹೇಳಿದರು. ದುರಂತದಲ್ಲಿ ಮೃತಪಟ್ಟ ಕುಟುಂಬಕ್ಕೆ 1 ಲಕ್ಷ ರೂ. ಹಾಗೂ ಗಾಯಾಳುಗಳಿಗೆ 25 ಸಾವಿರ ರೂ. ನೀಡುವುದಾಗಿ ಸಂಸದರು ಘೋಷಿಸಿದ್ದಾರೆ.



ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಅಪಘಾತದಲ್ಲಿ ಮೃತಪಟ್ಟವರ ಮನೆಗೆ ತೆರಳಿ ವೈಯಕ್ತಿಕವಾಗಿ 1 ಲಕ್ಷ ರೂ. ಪರಿಹಾರ ನೀಡಿದ್ದೇನೆ. ಹೋದ ಜೀವನಕ್ಕೆ ಬೆಲೆ ಕಟ್ಟಲು ಆಗುವುದಿಲ್ಲ.

ನೊಂದಿರುವ ಕುಟುಂಬಗಳಿಗೆ ದುಃಖ ಭ–ರಿಸುವ ಶಕ್ತಿಯನ್ನು ನೀಡಲೆಂದು ದೇವರಲ್ಲಿ ಪ್ರಾರ್ಥಿಸುವೆ ಎಂದರು.

# ಜಾತಿ ಗಣತಿಯಲ್ಲಿ ದೇವಾಂಗ ಸಮಾಜಕ್ಕೆ ಅನ್ಯಾಯವಾಗದಿರಲಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಯುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಕ್ರೈಸ್ತರನ್ನು ದೇವಾಂಗ ಸಮುದಾಯದೊಟ್ಟಿಗೆ ಸೇರಿಸಿದ್ದು ಸಮುದಾಯಕ್ಕೆ ತೊಂದರೆಯಾಗಲಿದೆ ಎಂದು ಕಪಿಸಿಸಿ ರಾಜ್ಯ ಕಾರ್ಯದರ್ಶಿ ಎಂ.ಹೆಚ್. ಕುಮಾರಶೆಟ್ಟಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ದೇವಾಂಗ ಸಮುದಾಯವು ಆರ್ಥಿಕ ಹಾಗೂ ಸಾಮಾಜಿ–ಕವಾಗಿ ಹಿಂದುಳಿದಿದೆ. ಶಿಕ್ಷಣ, ಉದ್ಯೋಗ ಮತ್ತು ರಾಜ–ಕೀಯ ಕ್ಷೇತ್ರಗಳಲ್ಲಿ ಪ್ರಾತಿನಿಧ್ಯ ಕೊರತೆಯಿಂದಲೇ ಸಮುದಾಯ ಹಿಂದುಳಿಯುತ್ತಿದೆ. ಪರಿಸ್ಥಿತಿ ಹೀಗಿರುವಾಗ ದೇವಾಂಗ ಕ್ರೈಸ್ತರನ್ನು 2ಎ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇ–ರಿಸಿರುವುದು ನಮ ಸಮಾಜ–ಕ್ಕೆ ಹೊಡೆತ ಬಿದ್ದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹಿಂದೂ ಸಮಾಜದ ಬಡ ಹಾಗು ಆರ್ಥಿಕವಾಗಿ ಹಿಂದುಳಿದ ಜನರನ್ನು ಕ್ರೈಸ್ತ ಮಿಷನರಿಗಳು ಮತಾಂತರ ಮಾಡುತ್ತಿರುವುದು ಸ್ಪಷ್ಟವಾಗಿದೆ. ಸರ್ಕಾರ ಈ ಬಗ್ಗೆ ತನಿಖೆ ನಡೆಸಿ ಮತಾಂತರ ಕೇಂದ್ರಗಳನ್ನು ಪತ್ತೆಹಚ್ಚಿ, ಇಂತಹ ಕೃತ್ಯಗಳಲ್ಲಿ ತೊಡಗಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ದೇವಾಂಗ ಕ್ರೈಸ್ತರನ್ನು ಹಿಂದುಳಿದ ವರ್ಗಗಳ 2ಎ ಪಟ್ಟಿಯಿಂದ ಕೈಬಿಡಬೇಕೆಂದು ದೇವಾಂಗ ಸಮುದಾಯದ ಪರವಾಗಿ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ದೇವಾಂಗ ಸಮಾಜದ ಶಂಕರ್ ಶೆಟ್ಟಿ, ಚಂದ್ರಕುಮಾರ್ ಲಕ್ಷ್ಮಣ್, ಪ್ರಕಾಶ್ ತೇಜಾವತಿ ಇದ್ದರು.


# ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿಗೆ ಗುರುದೇವ್ ಅಧ್ಯಕ್ಷ

## ಆರ್.ಟಿ. ದ್ಯಾವೇಗೌಡ ಬಣಕ್ಕೆ ಹಿನ್ನಡೆ । ಅಧ್ಯಕ್ಷರ ಕೊಠಡಿಗೆ ಬೀಗ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷ ಹುದ್ದೆಗಾಗಿ ಹಲವು ದಿನಗಳಿಂದ ನಡೆದ ಹಗ್ಗಜಗ್ಗಾಟಕ್ಕೆ ತೆರೆ ಬಿದ್ದಿದ್ದು ಅಶೋಕ್ ಹಾರನಹಳ್ಳಿ ಬಣದ ಬಿ.ಆರ್. ಗುರುದೇವ್ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

2025 ಜನವರಿ 10 ರಂದು ಎಂಟಿಇಎಸ್ ಅಧ್ಯಕ್ಷರಾಗಿ ಆರ್.ಟಿ. ದ್ಯಾವೇಗೌಡ ಆಯ್ಕೆಯಾಗಿದ್ದರು. ಆದರೆ ಕೇವಲ ಒಂಬತ್ತು ತಿಂಗಳಲ್ಲಿ 24 ನಿರ್ದೇಶಕರಲ್ಲೇ ಒಮ್ಮತ ಮೂಡದೆ ಅವಿಶ್ವಾಸ ನಿರ್ಣಯದ ವರೆಗೆ ಬಂದು ನಿಂತಿತ್ತು. ಮಲೆನಾಡು ತಾಂತ್ರಿಕ ಕಾಲೇಜು ಸಿಬ್ಬಂದಿ ನೇಮಕ ವಿಚಾರದಲ್ಲಿ ಭ್ರಷ್ಟಾಚಾರ ನಡೆದಿದೆ, ಹಿರಿಯ ನಿರ್ದೇಶಕರಿಗೆ ಗೌರವ ಕೊಡುತ್ತಿಲ್ಲವೆಂಬ ವಿಚಾರ ಮುಂದಿಟ್ಟುಕೊಂಡು ಅಶೋಕ್ ಹಾರನಹಳ್ಳಿ ನೇತೃತ್ವದ 13 ನಿರ್ದೇಶಕರು ಆರ್.ಟಿ. ದ್ಯಾವೇಗೌಡರ ವಿರುದ್ಧ ಮುನಿಸು ತೋರಿದ್ದರು.



ಸೆ. 8 ರಂದು ನಡೆದ ಅವಿಶ್ವಾಸ ನಿರ್ಣಯ ಸಭೆಯಲ್ಲಿ ನಡಾವಳಿ ಪುಸ್ತಕಕ್ಕೆ ಹಾರನಹಳ್ಳಿ ಅಶೋಕ್ ಬಣದ ನಿರ್ದೇಶಕರು ಸಹಿ ಹಾಕದ ಹಿನ್ನಲೆಯಲ್ಲಿ ಅಧ್ಯಕ್ಷ ಆರ್.ಟಿ. ದ್ಯಾವೇಗೌಡ, ಕಾರ್ಯದರ್ಶಿ ಚೌಡುವಳ್ಳಿ ಜಗದೀಶ್, ಖಜಾಂಚಿ ಪಾರ್ಶ್ವನಾಥ್ ಅವರು ವಿಶ್ವಾಸಮತ ಪಡೆಯುವಲ್ಲಿ ವಿಫಲವಾಗಿರುವುದರಿಂದ ಅವರು ತಮ ಹುದ್ದೆಗಳಲ್ಲಿ ಮುಂದುವರೆಯುವಂತಿಲ್ಲ. ಹಾಗೆಯೇ ಅವರು ಮಾಡಿದ ಯಾವ ಆದೇಶಗಳನ್ನು ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಮಾನ್ಯ ಮಾಡುವಂತಿಲ್ಲವೆಂದು ಸಹಕಾರ ಸಂಘಗಳ ಉಪನಿಬಂಧಕರು ಆದೇಶಿಸಿದ್ದಾರೆ.

ಸಂಸ್ಥೆಯ ನಿಯಮ ಉಲ್ಲಂಘನೆ ಆರೋಪದಡಿ ನಿರ್ದೇಶಕರಾದ ಡಾ. ಅರವಿಂದ್, ಎಸ್.ಜಿ. ಶ್ರೀಧರ್ ಹಾಗೂ ಜಿ.ಆರ್. ಶ್ರೀನಿವಾಸ್ ಅವರನ್ನು ಅಮಾನತು ಮಾಡಿ ಆರ್.ಟಿ. ದ್ಯಾವೇಗೌಡ ಸೆ. 6 ರಂದು ಆದೇಶಿಸಿದ್ದರು. ಆಡಳಿತ ಮಂಡಳಿ ವಿವಾದ ಹಿನ್ನಲೆಯಲ್ಲಿ ಸೆ. 8ರ ಸೋಮವಾರ ಅವಿಶ್ವಾಸ ನಿರ್ಣಯ ಸಭೆ ನಿಗದಿಪಡಿಸಲಾಗಿತ್ತು. ಆದ–ರೆ ಸಭೆಗೆ ಅಮಾನತು ಆಗಿರುವ ನಿರ್ದೇಶಕರು ಬರುವ ಹಾಗಿಲ್ಲವೆಂದು ಅಧ್ಯಕ್ಷರು ಹಾಗು ಅವರ ಬಣದ ನಿರ್ದೇಶಕರು ಹೇಳುತ್ತಿದ್ದಂತೆ ಅಶೋಕ್ ಹಾರನಹಳ್ಳಿ ಬಣದ ಉಳಿದ 10 ನಿರ್ದೇಶಕರು ಸಹ ಹಾಜರಾತಿ ಪುಸ್ತಕಕ್ಕೆ ಸಹಿ ಹಾಕದೆ ನಿರ್ಗಮಿಸಿದ್ದರು.

ಸೆ. 8ರ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಹಾಜರಿದ್ದ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿಯ ಅಭಿವೃದ್ಧಿ ಅಧಿಕಾರಿ ಎಂ. ಜಗದೀಶ್ ಅವರು ಎರಡೂ ಕಡೆಯ ವರದಿ ಪಡೆದು ತೆರಳಿದ್ದರು. ಸೆ. 17ರ ಬುಧವಾರ ಈ ಸಂಬಂಧ ಆದೇಶ ಹೊರಡಿಸಿದ್ದು ಬಿ.ಆರ್. ಗುರುದೇವ್ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಜಿ.ಟಿ. ಕುಮಾರ್ ಹಾಗೂ ಎಸ್.ಜಿ. ಶ್ರೀಧರ್ ಅವರನ್ನು ಖಜಾಂಚಿಂ–ಯಾಗಿ ಆಯ್ಕೆ ಮಾಡಲಾಗಿದೆ.

**ಅಧ್ಯಕ್ಷರ ಕೊಠಡಿಗೆ ಬೀಗ:**

ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷರಾಗಿ ಬಿ.ಆರ್. ಗುರುದೇವ್ ಅವರು ಸಹಕಾರ ಸಂಘಗಳ ಉಪನಿಬಂಧಕರ ಆದೇಶದಂತೆ ಆಯ್ಕೆಯಾಗಿದ್ದರೂ ಬುಧವಾರ ಅಧಿಕಾರ ಸ್ವೀಕಾರ ಸಾಧ್ಯವಾಗಲಿಲ್ಲ. ಅಧ್ಯಕ್ಷರ ಕೊಠಡಿಗೆ ಬೀಗ ಹಾಕಲಾಗಿತ್ತು. ಸ್ವಲ್ಪ ಹೊತ್ತು ಕಾದರು ಯಾರೂ ಬಾರದೆ ಇರುವುದರಿಂದ ವಾಪಸ್ಸಾಗಬೇಕಾಯಿತು.

ಎಂಟಿಇಎಸ್ ನೂತನ ಅಧ್ಯಕ್ಷ ಬಿ.ಆರ್. ಗುರುದೇವ್ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುಮತಕ್ಕೆ ಮಾನ್ಯತೆ ಇದೆ. ಅದೇ ರೀತಿ ನಾವು ಬಹುಮತ ಪಡೆದು ಅವಿಶ್ವಾಸ ನಿರ್ಣಯದಲ್ಲಿ ಅಧಿಕಾರ ಸ್ವೀಕಾರಕ್ಕೆ ಹೋದಾಗ ಅವರು ನ್ಯಾಯಾಲಯ ಮೆಟ್ಟಿಲೇರಿದ್ದರು. ಬಹುಮತ ಆಧಾರದಡಿ ನಾವೇ ಆಡಳಿತ ನಡೆಸಬೇಕೆಂದು ತೀರ್ಪು ಬಂದಿದೆ. ಅಧ್ಯಕ್ಷರ ಕೊಠಡಿಗೆ ಬೀಗ ಹಾಕಿದ್ದಾರೆ. ಈ ನಡೆಯನ್ನು ಖಂಡಿಸುತ್ತೇನೆ. ನಾವೇ ಅವರನ್ನು ಅಧ್ಯಕ್ಷ ಸ್ಥಾನದಲ್ಲಿ ಕೂರಿಸಿದ್ದೆವು, ನಾವು ಸಹಕರಿಸದಿದ್ದರೆ ಅವರು ಯಾವ ಕಾರಣ–ಕ್ಕೂ ಅಧ್ಯಕ್ಷರಾಗುತ್ತಿರಲಿಲ್ಲ. ಪೊಲೀಸರ ಮೂಲಕ ಬೀಗ ತೆಗೆಸಿ ಗುರುವಾರ ಅಧಿಕಾರ ಸ್ವೀಕರಿಸುತ್ತೇವೆ ಎಂದರು.

## ಬಾಳ್ಳುಪೇಟೆಯಲ್ಲಿ ಮೋದಿ ಹುಟ್ಟು ಹಬ್ಬ: ಸೇವಾ ಪಾಕ್ಷಿಕಕ್ಕೆ ಚಾಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟು ಹಬ್ಬದ ಅಂಗವಾಗಿ ತಾಲ್ಲೂಕಿನ ಬಾಳ್ಳುಪೇಟೆಯ ಕಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಶಾಸಕ ಸಿಮೆಂಟ್ ಮಂಜು ಸಸಿ ನೆಡುವ ಮೂಲಕ ಸೇವಾ ಪಾಕ್ಷಿಕ ಅಭಿಯಾನಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನರೇಂದ್ರ ಮೋದಿ ವಿಶ್ವ ಕಂಡ ಶ್ರೇಷ್ಠ ನಾಯಕರಲ್ಲಿ ಒಬ್ಬರು. ದಕ್ಷ ಮತ್ತು ಪ್ರಾಮಾಣಿಕ ಆಡಳಿತದಿಂದ ಅವರು ಜನಮನದಲ್ಲಿ ಉಳಿದಿದ್ದಾರೆ. ಭಾರತವನ್ನು ವಿಶ್ವಗುರು ಮಾಡುವ ಪಣತೊಟ್ಟಿರುವ ಮೋದಿಯವರಿಗೆ ಎಲ್ಲರೂ ಕೈ ಜೋಡಿಸಬೇಕು ಎಂದು ಕರೆ ನೀಡಿದರು.ಸೆ. 17ರಿಂದ ಅ. 2ರ ವರೆಗೆ ಸೇವಾ ಪಾಕ್ಷಿಕ ಅಭಿಯಾನದಡಿ ಸ್ವಚ್ಛತಾ ಕಾರ್ಯ, ರಕ್ತದಾನ ಶಿಬಿರ ಸೇರಿದಂತೆ 10ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮೋದಿ ಅವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲು ಈ ಕಾರ್ಯಕ್ರಮಗಳು ನೆರವಾಗುತ್ತವೆ ಎಂದು ತಿಳಿಸಿದರು.

ದೇಶದ ಅಭಿವೃದ್ಧಿಯಲ್ಲಿ ಯುವ ಸಮೂಹ ಪ್ರಮುಖ ಪಾತ್ರ ವಹಿಸುತ್ತಿದ್ದು, ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆಯಬೇಕು ಎಂದು ಕಿವಿಮಾತು ನೀಡಿದ ಶಾಸಕ, ಅಭಿವೃದ್ಧಿ ಗುರಿಯನ್ನು ಸಾಧಿಸಲು ಶಿಕ್ಷಣವೇ ಆಧಾರ ಎಂದರು.




ವಿದ್ಯಾರ್ಥಿಗಳಿಗೆ ಸಿಹಿ ಹಂಚಲಾಯಿತು.

ಗ್ರಾ.ಪಂಸದಸ್ಯರಾದ ಭರತ್, ಗೌರಮ್ಮ, ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಶಿವಕುಮಾರ್, ಬಾಗೆ ಶಕ್ತಿ ಕೇಂದ್ರದ ಅಧ್ಯಕ್ಷ ರಾಕೇಶ್, ಬಿಜೆಪಿ ಮುಖಂಡರಾದ ಚನ್ನಬಸಪ್ಪ ಇತರರಿದ್ದರು.

# ಬಡ ಮಕ್ಕಳ ಶಿಕ್ಷಣಕ್ಕೆ ಸ್ಥಿತಿವಂತರು ಸಹಕರಿಸಿ: ಡಾ. ಪುಷ್ಪಲತಾ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಅರಕಲಗೂಡು: ಸಂವಿಧಾನದಡಿ ಸೌಕರ್ಯ ಪಡೆದು ಕೊಂಡಿರುವ ಎಲ್ಲಾ ಸಮುದಾಯ ಆಯಾ ಸಮುದಾಯದ ಅಭಿವೃದ್ಧಿಗೆ ಕೈಜೋಡಿಸುವ ಮೂಲಕ ಅಂಬೇಡ್ಕರ್ ಅವರ ಸಂವಿಧಾನದ ಆಶಯವನ್ನು ಈಡೇರಿಸಬೇಕಿದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಪುಷ್ಪಲತಾ ತಿಳಿಸಿದರು.

ಪಟ್ಟಣದ ಕೆಲ್ಲೂರು ಸರಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ವಿಶ್ವಚೇತನ ಜೈಭೀಮ್ ಚಾ–ರಿಟೆಬಲ್ ಟ್ರಸ್ಟ್ ವತಿಯಿಂದ ನೋಟ್ ಬುಕ್ ಹಾಗೂ ಬ್ಯಾಗ್ ವಿತರಣೆ ಮಾಡಿ ಮಾತನಾಡಿದ ಅವರು, ಪ್ರತಿ ಸಮುದಾಯದಲ್ಲಿಯೂ ಬಡ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಹೆಚ್ಚಿನದಾಗಿ ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಈ ಸಮುದಾಯದ ಮಕ್ಕಳೇ ಅಧಿಕವಾಗಿದ್ದಾರೆ. ಇಂತಹ ಮಕ್ಕಳನ್ನುಗುರುತಿಸಿ ಉತ್ತೇಜಿಸುವ ಕೆಲಸವನ್ನು ನೂತವಾಗಿ ರಚನೆಯಾಗಿರುವ ವಿಶ್ವ ಚೇತನ ಜೈ ಭೀಮ್ ಚಾರಿಟೆಬಲ್ ಟ್ರಸ್ಟ್ ಮಾಡುತ್ತಿರುವುದು ಸ್ವಾಗತಾರ್ಹ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆರೋಗ್ಯ ದೃಷ್ಟಿಯಿಂದ ಮಕ್ಕಳಿಗೆ ಪ್ಲಾಸ್ಟಿಕ್ ಬಾಟಲ್‌ನಿಂದ ನೀರು ಕುಡಿಯದಂತೆ ಎಚ್ಚ–ರಿಕೆಯನ್ನು ಪೋಷಕರು, ಶಿಕ್ಷಕರು ವಹಿಸಬೇಕಿದೆ. ಸಮಾಜಮುಖಿ ಕಾರ್ಯವನ್ನು ನಿರ್ವಹಿಸುತ್ತಿರುವ ಈ ಚಾ–ರಿಟೆಬಲ್ ಟ್ರಸ್ಟ್ ಮುಂದಿನ ದಿನಗಳಲ್ಲಿ ಮಕ್ಕಳಿಗೆ ಸ್ಟೀಲ್ ಬಾಟಲ್ ನೀಡಲು ಮುಂದಾಗಬೇಕಿದೆ. ಇದಕ್ಕೆ ನಾನು ಕೂಡ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಗ್ರೇಡ್–2 ತಹ ಸೀಲ್ದಾರ್ ಸಿ.ಸ್ವಾಮಿ ಮಾತನಾಡಿ, ಸಮಾಜದಲ್ಲಿ ತೊಡಗಿ ಕೊಂಡಿರುವ ಸಂಘ ಸಂಸ್ಥೆಗಳು ಉದ್ಘಾಟನೆಗೊಂಡ ಬಳಿಕ ಕಾರ್ಯಚಟುವಟಿಕೆಗಳಿಂದ ದೂರ ಉಳಿಯುತ್ತವೆ. ಆದರೆ ಇನ್ನೂ ಸಾರ್ವಜನಿಕವಾಗಿ ಉದ್ಘಾಟನೆಗೊಳ್ಳದೆ. ಈ ದೇಶದ ಮುಂದಿನ ಭವಿಷ್ಯದ ರೂವಾರಿಗಳಾದ ಸರ್ಕಾರಿ ಶಾಲಾ ಮಕ್ಕಳಿಗೆ ನೋಟ್ ಬುಕ್, ಬ್ಯಾಗ್ ಹಾಗೂ ಇತರೆ ಪರಿಕರಗಳನ್ನು ನೀಡುತ್ತಿರುವುದು ಹೆಮ್ಮೆಯ ಸಂಗತಿ ಹಾಗು ಇತರೆ ಸಂಘಟನೆಗಳಿಗೆ ಮಾದ–ರಿಯಾಗಿದೆ ಎಂದು ಬಣ್ಣಿಸಿದರು.


ಹಿರಿಯ ವಕೀಲ ಶಂಕರಯ್ಯ ಮಾತನಾಡಿ, ಕೆಲ್ಲೂರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ಎಲ್ಲಾ ಮಕ್ಕಳು ಉನ್ನತ ಮಟ್ಟದ ಕಲಿಕೆ ಹೊಂದಿರುವುದನ್ನು ಕಂಡು ತುಂಬಾ ಸಂತೋಷವಾಗಿದೆ. ಕನ್ನಡ ಮಾದ್ಯಮ ಶಾಲೆಯ ಮಕ್ಕಳು ಆಂಗ್ಲಭಾಷೆಯಲ್ಲಿ ಭಾಷಣ ಮಾಡುವುದನ್ನು ನೋಡಿ ಆಶ್ಚರ್ಯ ಮತ್ತು ಖುಷಿಯ ವಿಚಾರ. ಇದಕ್ಕೆ ಇಲ್ಲಿನ ಶಿಕ್ಷಕರ ಬದ್ಧತೆ ಪ್ರೇರಣೆಯಾಗಿದೆ ಎಂದರು.

ಶಾಲೆಯ ಮುಖ್ಯ ಶಿಕ್ಷಕ ಯೋಗರಾಜ್ ಮಾತನಾಡಿ, ನಮ ಶಾಲೆಗೆ ಒಂದೇ ಕೊಠಡಿಯಿದ್ದು, ಮತ್ತೊಂದು ಕೊಠಡಿ ಅವಸಾನದಲ್ಲಿದೆ. ಸಂಕಷ್ಟದ ಪರಿಸ್ಥಿತಿಯಲ್ಲಿ ಒಂದೇ ಕೊಠಡಿಯಲ್ಲಿ ಮಕ್ಕಳಿಗೆ ಬೋಧನೆ ಮಾಡುವ ಸಂದರ್ಭ ಎದುರಾಗಿದೆ. ಹೆಚ್ಚುವರಿ ಕೊಠಡಿ ನಿರ್ಮಿಸಿಕೊಡುವಂತೆ ಶಿಕ್ಷಣ ಇಲಾಖೆ ಅಧಿಕಾರಿ, ಶಾಸಕರಿಗೆ ಮನವಿ ಸಲ್ಲಿಸಿದ್ದರೂ ಕಾರ್ಯ ರೂಪಕ್ಕೆ ಬಂದಿಲ್ಲ. ಮತ್ತೊಮೆ ಮನವಿ ಸಲ್ಲಿಸಲಾಗುವುದು. ನಮ ಶಾಲಾ ಮಕ್ಕಳಿಗೆ ಉಚಿತವಾಗಿ ಬ್ಯಾಗ್, ನೋಟ್ ಪುಸ್ತಕ ಹಾಗೂ ಇತರೆ ಪರಿಕರಗಳನ್ನು ವಿಶ್ವಚೇತನ ಜೈಭೀಮ್ ಚಾರಿಟೆಬಲ್ ಟ್ರಸ್ಟ್ ನೀಡುತ್ತಿರುವುದಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದು ಹೇಳಿದರು.

ಟ್ರಸ್ಟ್ ಅಧ್ಯಕ್ಷ ಕಿರಣ್‌ಕುಮಾರ್, ಹಿರಿಯ ವಿದ್ಯಾರ್ಥಿಗಳಾದ ವಿಜಯ್ ಕುಮಾರ್, ರಾಮು, ಹ–ರೀಶ್, ಲೋಕೇಶ್, ರಘು, ಯೋಧ ಬಾಲು, ಗಣೇಶ್, ಗ್ರಾಮದ ಮುಖಂಡರಾದ ಗೋಪಾಲ್, ಟ್ರಸ್ಟ್‌ನ ನಿರ್ದೇಶಕರಾದ ಪ್ರದೀಪ್, ರವಿ, ಮೋಹನ್‌ಕುಮಾರ್, ರಂಗಸ್ವಾಮಿ, ಗಣೇಶ್, ಲೋಕೇಶ್ ಇತರರು ಉಪಸ್ಥಿತರಿದ್ದರು.

# ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆಗೆ ಸಹಕರಿಸಲು ಮನವಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಚನ್ನರಾಯಪಟ್ಟಣ : ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಡೆಯುತ್ತಿರುವ ಸಮೀಕ್ಷೆಗೆ ಪ್ರತಿ ಕುಟುಂಬಸ್ಥರು ಸಹಕರಿಸಬೇಕು. ನಿಖರ ಮಾಹಿತಿ ನೀಡಬೇಕು ಎಂದು ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ರಾಜೇಶ್ ಚವ್ಹಾಣ್ ಕೋರಿದ್ದಾರೆ.

ತಾಲ್ಲೂಕಿನಲ್ಲಿ ಹೆಚ್ಚು ಹಿಂದುಳಿದ ಜನಾಂಗವಿದ್ದು ರಾಜ್ಯ ಹಿಂದುಳಿದ ವರ್ಗಗಳ ಆಯೋಗ ರಾಜ್ಯದ ಸಾಮಾಜಿ–ಕ ಮತ್ತು ಶೈಕ್ಷಣಿಕ–2025ರ ಮನೆ–ಮನೆ ಸಮೀಕ್ಷೆಯನ್ನು ಸೆ. 22ರಿಂದ ಅ. 7ರ ವರೆಗೆ ರಾಜ್ಯಾದ್ಯಂತ ಹಮಿಕೊಂಡಿದೆ.

ಸಮೀಕ್ಷೆಯಲ್ಲಿ ಪ್ರಶ್ನಾವಳಿಯಲ್ಲಿ ಸುಮಾರು 60 ಪ್ರಶ್ನೆಗಳಿದ್ದು, ಪ್ರಶ್ನಾವಳಿಯಲ್ಲಿ ವ್ಯಾಪಾರ, ಉದ್ಯೋಗ, ವಿದ್ಯಾರ್ಹತೆ, ಕೌಶಲ ತರಬೇತಿ ಅಗತ್ಯತೆ, ಆದಾಯ, ಕುಟುಂಬದ ಸ್ಥಿರ ಮತ್ತು ಚರಾಸ್ತಿ ವಿವರಗಳು, ಧರ್ಮ, ಜಾತಿ, ಉಪಜಾತಿ, ಕುಲಕಸುಬು ಮುಂತಾದ ಮಾಹಿತಿಗಳ ಬಗ್ಗೆ ಪ್ರಶ್ನೆಗಳು ಇರುತ್ತವೆ. ಪ್ರತಿ ಕುಟುಂಬವು ಮಾಹಿತಿ ನೀಡಲು ಪಡಿತರ ಚೀಟಿ, ಆಧಾರ್ ಕಾರ್ಡ್ ಸಂಖ್ಯೆ, ಮತದಾರರ ಗುರುತಿನ ಚೀಟಿ, ವಿಕಲ ಚೇತನವಾಗಿದ್ದಲ್ಲಿ ಅಥವಾ ಯುಐಡಿ ಕಾರ್ಡ್ ಅಥವಾ ಪ್ರಮಾಣ ಪತ್ರಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು. ಸಮೀಕ್ಷೆ ವೇಳೆ ಇ–ಕೆವೈಸಿ ಪ್ರಕ್ರಿಯೆಗಾಗಿ ಓಟಿಪಿ ಸಂಖ್ಯೆ ಸದಸ್ಯರ ಆಧಾರ್ ನಂಬರ್ಗೆ ಜೋಡಣೆ ಆಗಿರುವ ಮೊಬೈಲ್ ನಂಬರ್ ಗೆ ಬರುತ್ತದೆ ಒಂದು ವೇಳೆ ಸದಸ್ಯರು ಮನೆಯಲ್ಲಿ ಇಲ್ಲದಿದ್ದರೆ ಕುಟುಂಬದ ಪರವಾಗಿ ಉತ್ತರ ನೀಡುತ್ತಿರುವ ಸದಸ್ಯರು ಫೋನ್ ಮೂಲಕ ಓಟಿಪಿ ಪಡೆದು ಮಾಹಿತಿ ನೀಡಬೇಕಾಗಿರುತ್ತದೆ.

ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಸುಮಾರು 88,634 ಮನೆಗಳಿದ್ದು ಅದರಲ್ಲಿ ನಗರ ಪ್ರದೇಶದಲ್ಲಿ 18,859 ಮತ್ತು ಗ್ರಾಮೀಣ ಪ್ರದೇಶದಲ್ಲಿ 69,775 ಮನೆಗಳಿವೆ ಎಂದು ತಿಳಿಸಿದರು.

8 ವರ್ಷ ಮೇಲ್ಪಟ್ಟ ಪ್ರತಿಯೊಬ್ಬ ಸದಸ್ಯನಿಗೂ ಆಧಾರ್ ಕಡ್ಡಾಯವಾಗಿದೆ. ಆಧಾರ್ ಇಲ್ಲದಿದ್ದರೆ ಹತ್ತಿರದ ಆಧಾರ್ ನೋಂದಣಿ ಕೇಂದ್ರದಲ್ಲಿ ವಿವರಗಳನ್ನು ನೋಂದಾಯಿಸಿ ನೊಂದಣಿ ಸಂಖ್ಯೆಯನ್ನು ಪಡೆದುಕೊಂಡು ಸಮೀಕ್ಷೆಯಲ್ಲಿ ಭಾಗವಹಿಸಬಹುದು. ಹಾಗೆಯೇ ಮೊಬೈಲ್ ನಂಬರ್ ಆಧಾರ್ ನಂಬರ್‌ಗೆ ಲಿಂಕ್ ಆಗಿಲ್ಲದಿದ್ದರೆ ಅದನ್ನು ತಕ್ಷಣವೇ ಲಿಂಕ್ ಮಾಡಿಸಿಕೊಳ್ಳುವುದು ಹಾಗೂ ಜನಪ್ರತಿನಿಧಿಗಳು. ಸಂಘ ಸಂಸ್ಥೆಗಳು. ಸಮುದಾಯಗಳು ಹಾಗೂ ಸಾರ್ವಜನಿಕರು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಸ್ವಯಂ ಪ್ರೇ–ರಿತವಾಗಿ ಸಹಕಾರ ರಾಜ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಡೆಯುತ್ತಿರುವ ಸಮೀಕ್ಷೆಯನ್ನು ಯಶಸ್ವಿಗೊಳಿಸಲು ಕೋರಿದರು. ಜೊತೆಗೆ ಇದು ನಮ ಸಮೀಕ್ಷೆ–ನಾವು ಜವಾಬ್ದಾರಿಯಿಂದ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

# ಪ್ರಬಂಧ ಸ್ಪರ್ಧೆಯಲ್ಲಿ ರಾಜ್ಯ ಮಟ್ಟಕ್ಕೆ ತ್ರಿವೇಣಿ ಆಯ್ಕೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಹಾಸನದ ಅಂಬೇಡ್ಕರ್ ಭವನದಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಪ್ರಯುಕ್ತ ನಡೆದ ನನ್ನ ಮತ ನನ್ನ ಹಕ್ಕು ಪ್ರಬಂಧ ಸ್ಪರ್ಧೆಯಲ್ಲಿ ಪಟ್ಟಣದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿನಿ ತ್ರಿವೇಣಿ ದ್ವಿತೀಯ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಪಟ್ಟಣದ ಶಿಕ್ಷಕರ ಭವನದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ ತಾಲ್ಲೂಕು ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ಈ ವಿದ್ಯಾರ್ಥಿನಿ ಜಿಲ್ಲಾ ಮಟ್ಟದಲ್ಲಿಯೂ ಸಾಧನೆ ಮಾಡಿದ್ದಾಳೆ. ತಾಲ್ಲೂಕಿನ ಚಿಕ್ಕರಕಲಗೂಡು ಗ್ರಾಮದ ಚನ್ನಕೇಶವ ಅವರ ಮಗಳಾಗಿರುವ ಈಕೆ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿಯೂ ಕೂಡ ಸಾಧನೆ ಗೈದಿದ್ದಾಳೆ.

ಹಾಸನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ. ಸ್ವರೂಪ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹಾಗೂ ಜಿಪಂ ಸಿಇಒ ಪೂರ್ಣಿಮಾ ಅವರಿಂದ ಪ್ರಶಸ್ತಿಯನ್ನು ಪಡೆದುಕೊಂಡಿರುವ ವಿದ್ಯಾರ್ಥಿನಿ ತ್ರಿವೇಣಿ ಅವರನ್ನು ಕಾಲೇಜಿನ ಪ್ರಾಂಶುಪಾಲ ಅನಂತರಾಜು, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಮಂಜು ಶೆಟ್ಟಿಗೌಡ ಹಾಗೂ ಎಲ್ಲಾ ಸದಸ್ಯರು ಮತ್ತು ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

# 19ಕ್ಕೆ ಹಳೆಯ ವಿದ್ಯಾರ್ಥಿಗಳ ಸಮ್ಮಿಲನ

ಚನ್ನರಾಯಪಟ್ಟಣ: ತಾಲ್ಲೂಕಿನ ತಗಡೂರು ಸರ್ಕಾರಿ ಪ್ರೌಢ ಶಾಲೆ ಆರಂಭವಾಗಿ 40 ವರ್ಷ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಹಳೆಯ ವಿದ್ಯಾರ್ಥಿಗಳೆಲ್ಲಾ ಸೇರಿ ಸೆ. 19 ರ ಶುಕ್ರವಾರ ಗುರುವಂದನಾ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಿದ ಸುಮಾರು 30 ಶಿಕ್ಷಕರನ್ನು ಒಂದೇ ವೇದಿಕೆಯಲ್ಲಿ ಸನ್ಮಾನಿಸಲು ನಿರ್ಧರಿಸಲಾಗಿದೆ.

# ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ

ಹಾಸನ: ಕಾರ್ಮಿಕ ಆಯು ಕ್ತಾಲಯ ಹಾಗೂ ಕರ್ನಾಟಕ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ, ಗಿಗ್ ಕಾರ್ಮಿಕರ ವಿಮಾ ಯೋಜನೆ, ಪತ್ರಿಕಾ ವಿತರಕರ ವಿಮಾ ಯೋಜನೆ, ಮೋಟಾರು ಸಾರಿಗೆ ಹಾಗೂ ಸಂಬಂಧಿಸಿದ ನೌಕರರ ಅಪಘಾತ ಪರಿಹಾರ ಯೋಜನೆಯಲ್ಲಿ ನೊಂದಾಯಿತ ರಾದ ಅಸಂಘಟಿತ ಕಾರ್ಮಿಕರಿಗೆ ಸೆ.23ರ ಮಧ್ಯಾಹ್ನ 3 ಗಂಟೆಗೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಸ್ಮಾರ್ಟ್ ಕಾರ್ಡ್ ವಿತರಣಾ ಮತ್ತು ಅರಿವು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹಾಸನ ಉಪವಿಭಾಗದ ಕಾರ್ಮಿಕ ಅಧಿಕಾರಿ ತಿಳಿಸಿದ್ದಾರೆ.

# ಜಾತಿ ಕಾಲಂನಲ್ಲಿ ಶಿವಾರ್ಚಕ ಎಂದೇ ಬರೆಸಿ



ಹಾಸನ: ರಾಜ್ಯ ಸರ್ಕಾರ ನಡೆಸುತ್ತಿರುವ ಜಾತಿ ಜನಗಣತಿ ಸಮೀಕ್ಷೆಯಲ್ಲಿ ಶಿವಾರ್ಚಕ ಸಮುದಾಯದವರು ಜಾತಿ ಪಟ್ಟಿಯಲ್ಲಿ ಕ್ರಮ ಸಂಖ್ಯೆ ಎ–1320 ಶಿವಾರ್ಚಕ ಎಂದೇ ಬರೆಸಬೇಕೆಂದು ರಾಜ್ಯ ಶಿವಾರ್ಚಕ ಸಂಘದ ಮಾಜಿ ಅಧ್ಯಕ್ಷ ಕೆ.ಎಂ. ನಂಜುಂಡಪ್ಪ ಕೋರಿದ್ದಾರೆ.

ಸಮುದಾಯದವರು ಯಾವ ಗೊಂದಲಕ್ಕೆ ಒಳಗಾಗಬಾರದು. ಧರ್ಮ ಕಾಲಂನಲ್ಲಿ ಹಿಂದೂ ಹಾಗೂ ಉಪಜಾತಿ ಕಲಂನಲ್ಲಿ ಯಾವುದು ಇಲ್ಲ ಎಂದು ಬರೆಸಬೇಕು. ಅದರಿಂದ ನಿಖರ ಜನಸಂಖ್ಯೆ ದೊರೆತು ಸರ್ಕಾರಿ ಸೌಲಭ್ಯ ಹೊಂದಲು ಸಹಕಾ–ರಿಯಾಗಲಿದೆ.

ಸೆ. 22ರಿಂದ ರಾಜ್ಯ ಸರ್ಕಾರದಿಂದ ಗಣತಿ ನಡೆಯುತ್ತಿದ್ದು, ಗಣತಿದಾರರು ಮನೆ ಮನೆ ಸಮೀಕ್ಷೆಗೆ ಬರಲಿದ್ದಾರೆ. ಆದ್ದರಿಂದ ಆ ದಿನಗಳಲ್ಲಿ ಮನೆಯ ಯಾರಾದರೂ ಒಬ್ಬರು ಸದಸ್ಯರು ಮನೆಯಲಿಯೇ ಇದ್ದು, ಗಣತಿದಾರರಿಗೆ ನಿಖರ ಮಾಹಿತಿ ನೀಡಬೇಕು. ಗಣತಿದಾರರ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿ ಸಹಕ–ರಿಸಬೇಕೆಂದು ಮನವಿ ಮಾಡಿದ್ದಾರೆ.

# ಸೆ. 22 ರಂದು ಕುಂದು–ಕೊರತೆ ಸಭೆ

ಹಾಸನ: ತಾಲ್ಲೂಕಿನ ಎಲ್ಲಾ ರೈತಾಪಿ ವರ್ಗದ ಸಾರ್ವಜನಿಕರಿಗೆ ದೊರೆಯಬೇಕಾದ ಸೌಲಭ್ಯಗಳು ನಿಗದಿತ ಅವಧಿಯೊಳಗೆ ದೊರೆಯದೆ ಇದ್ದಾಗ ತಮ ಅಹವಾಲು ಸಲ್ಲಿಸಲು ಸೆ. 22ರ ಸೋಮವಾರ ತಾಲ್ಲೂಕು ಪಂಚಾಯಿತಿಯಲ್ಲಿ ಕುಂದು ಕೊರತೆ ಸಭೆ ಹಮಿಕೊಳ್ಳಲಾಗಿದೆ.

ಈ ತಿಂಗಳ ಸಭೆಯನ್ನು ಸೆ.15ರಂದು ಪ್ರಜಾಪ್ರಭುತ್ವ ದಿನಾಚರಣೆ ಇದ್ದುದರಿಂದ ಸೆ.22 ರಂದು ಆಯೋಜಿಸಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಸೆಪ್ಟೆಂಬರ್ 18

**11610:** ಇಟಲಿಯ ಗಣಿತಜ್ಞ ಗ್ಯಾಲಿಲಿಯೋ ಗ್ಯಾಲಿಲೀ ಮೊದಲ ಬಾರಿಗೆ ಜೂಪಿಟರ್‌ನ ಉಪಗ್ರಹಗಳನ್ನು ವಿವರವಾಗಿ ಗಮನಿಸಿ ವರದಿ ಮಾಡಿದರು.

**1739:** ನಾದಿರ್ ಶಾಹ್ ದೆಹಲಿ ಮೇಲೆ ದಾಳಿ ನಡೆಸಿ ಅನೇಕ ಆಸ್ತಿ ಸಂಪತ್ತನ್ನು ಕಸಿದುಕೊಂಡನು.

**1810:** ಚಿಲಿ ದೇಶ ಸ್ಪೇನ್‌ನಿಂದ ಸ್ವಾತಂತ್ರ್ಯ ಘೋಷಿಸಿತು.

**1851:** ಅಮೆರಿಕಾದ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಮೊದಲ ಬಾರಿಗೆ ಪ್ರಕಟವಾಯಿತು.

**1947:** ಅಮೆರಿಕಾದ ವಾಯುಪಡೆ ಸ್ವತಂತ್ರ ಶಾಖೆಯಾಗಿ ಸ್ಥಾಪನೆ ಆಯಿತು.

**1961:** ಯುನೈಟೆಡ್ ನೇಷನ್ಸ್‌ಪ್ರಧಾನ ಕಾರ್ಯದರ್ಶಿ ಡ್ಯಾಗ್ ಹಮರ್ ಶೋಲ್ಡ್ ಕಾಂಗೋ ದುರಂತದಲ್ಲಿ ವಿಮಾನಾಪಘಾತದಲ್ಲಿ ಸಾವಿಗೀಡಾದರು.

**1974:** ಹೈಲ್ಯಾಂಡ್ ಟವರ್ (ಇಥಿಯೋಪಿಯಾ ಚಕ್ರವರ್ತಿ ಹೈಲೆ ಸೆಲಸ್ಸಿ) ಅಧಿಕಾರದಿಂದ ಕೆಳಗಿಳಿಸಲ್ಪಟ್ಟರು.

### ಜನನ

**1905:** ಗ್ರೇಟಾ ಗಾರ್ಬೋ, ಹಾಲಿವುಡ್ ನಟಿ

**1907:** ಎಡ್ವಿನ್ ಮ್ಯಾಟ್, ಅಮೆರಿಕಾದ ಆರ್ಥಿಕ ತಜ್ಞ, ನೋಬೆಲ್ ಪುರಸ್ಕೃತ

**1950:** ರಂಜನ್ ಗೋಗೋಯ್, ಭಾರತದ 46ನೇ ಮುಖ್ಯ ನ್ಯಾಯಮೂರ್ತಿ

### ಮರಣ

**1931:** ವಿನ್‌ಸ್ಟನ್ ಚರ್ಚಿಲ್ ಅವರ ತಂದೆ ಲಾರ್ಡ್ ರ್ಯಾಂಡಾಲ್ಫ್ ಚರ್ಚಿಲ್

**1970:** ಜಿಮಿ ಹೆಂಡ್ರಿಕ್ಸ್, ಅಮೆರಿಕಾದ ಖ್ಯಾತ ಗಿಟಾರ್ಸ್ಟ್, ಗಾಯಕ

# ಬದುಕಿನ ವೈರುಧ್ಯಗಳ ಈ ಪಾದ ಪುಣ್ಯ ಪಾದ

ಭಾನುವಾರ ಬೆಂಗಳೂರಿನ ನಾಗರಬಾವಿಯಲ್ಲಿ ಬಾಡಿಗೆ ಮನೆಯಲ್ಲಿರುವ ಮಗನ ಮನೆಯಲ್ಲಿದ್ದೆ. ಮಧ್ಯಾಹ್ನ ಮನೆಗೆ ಬಂದ ಮಗನ ಸ್ನೇಹಿತ ಅವರ ಮನೆಗೆ ಸಂಜೆ ಬರಬೇಕೆಂದು ಆಹ್ವಾನಿಸಿದ. ಸರಿ ಸಂಜೆ ವಾಕ್ ಎಂದು ಮನೆಗೆ ಹೋದೆವು. ತುಂಬಾ ಲಕ್ಸುರಿಯಾದ ಮನೆ. ಅಣ್ಣ–ತಮ ಇಬ್ಬರೂ ಇಂಜಿನಿಯರ್‌ಗಳೇ. ವಿಶೇಷವಾಗಿ ಅಣ್ಣ ನನ್ನ ಗಮನ ಸೆಳೆದನು. ಈಗಿನ ಫಿಲಂ ಫೀಲ್ಡ್‌ನವರು ಹಿಂದೆ ಕೂದಲು ಬಿಡುವಂತೆ ಆತನು ಬಿಟ್ಟಿದ್ದನು. ಆತ ಬಾಂಬೆಯಲ್ಲಿ ಫಿಲಂ ಡೈರೆಕ್ಷನ್ ಫೀಲ್ಡ್‌ನಲ್ಲಿ ಕೆಲಸ ಮಾಡುತ್ತಿರುವುದಾಗಿ ತಿಳಿಸಲು ನನಗೆ ಕುತೂಹಲ ಉಂಟಾಯಿತು. ಆಗ ನನಗೆ ತಕ್ಷಣಕ್ಕೆ ಸಿನಿಮಾ ನಿರ್ದೇಶಕ ಸಿದ್ದು ಪೂರ್ಣಚಂದ್ರ ನೆನಪಾದರು. ಅವರು ನಾಗರಬಾವಿಯಲ್ಲಿ ಇರುವುದಾಗಿ ಹೇಳಿದ್ದರು. ಸಿದ್ದುಗೆ ಫೋನ್ ಮಾಡಿದೆ ರಿಸೀವ್ ಆಗಲಿಲ್ಲ. ಇಬ್ಬರನ್ನು ಪರಸ್ಪರ ಪರಿಚಯಿಸೋಣವೆಂದುಕೊಂಡಿದ್ದು ಆಗಲಿಲ್ಲ. ಮಾರನೇ ದಿನ ಬೆಳಿಗ್ಗೆ ಚಿತ್ರನಟ ಮೈಸೂರು ರಮಾನಂದ್ ಮನೆಗೆ ಬಂದರು. ಅವರ ಗೆಜ್ಜೆ–ಹೆಜ್ಜೆ ರಂಗ ತಂಡಕ್ಕೆ 50 ವರ್ಷ ತುಂಬಿದ ನೆನಪಿನಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಾಟಕ ಪ್ರದರ್ಶನ ಏರ್ಪಡಿಸಿ ನನ್ನನ್ನು ಕರೆದಿದ್ದರು ಹೋಗಲು ಸಾಧ್ಯವಾಗಿರಲಿಲ್ಲ. ಅವರು ಮನೆಗೆ ಬಂದವರೇ ಶಾಲು ಹೊದಿಸಿ ಪ್ರಶಸ್ತಿ ಫಲಕ ನೀಡಿ ಸನಾನಿಸಿದರು. ಇದು ನನಗೆ ಅನಿ–ರೀಕ್ಷಿತ. ಚಿತ್ರನಟರು ತಮ ಐವತ್ತು ವರ್ಷಗಳ ರಂಗಸಾಧನೆಯ ಬೃಹತ್ ಆಲ್ಬಂನ್ನು ಬ್ಯಾಗ್‌ನಿಂದ ತೆಗೆದು ತೋರಿಸುತ್ತಾ ಹೋದರು. ಸಿನಿಮಾ ಮತ್ತು ನಾಟಕ ರಂಗ ಈ ಎರಡೂ ಕ್ಷೇತ್ರದಲ್ಲೂ ಅವರ ಸೇವೆ ಅಪಾರ. ಅವರ ಈ ಕಲಾಸೇವೆಯನ್ನು ಕರ್ನಾಟಕ ಸರ್ಕಾರ ಗುರುತಿಸಿ ರಾಜ್ಯದ ರಾಜ್ಯೋತ್ಸವ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಬೇಕು. ಅಷ್ಟೊಂದು ಕಲಾಸಾಧನೆಯ ಫೋಟೋ, ಪತ್ರಿಕಾ ವರದಿ ಅವರ ದೊಡ್ಡ ಆಲ್ಬಂನಲ್ಲಿ ಅಡಕವಾಗಿ–ತ್ತು. ಅವರನ್ನು ಬೀಳ್ಕೊಟ್ಟು ನಾವು ದಂಪತಿ ಮೈಸೂರಿಗೆ ಹೊರಟೆವು. ಬಸ್‌ನಲ್ಲಿ ಮೈಸೂರು ರಮಾನಂದ್ ಅವರ ಆಶಾಜ್ಯೋತಿ ಭಾರತರತ್ನ ಡಾ. ಬಿ.ಆರ್.ಅಂಬೇಡ್ಕರ್ ಕಿರು ನಾಟಕ ಕೃತಿ ಓದುತ್ತಿದ್ದೆ ಸಿದ್ದು ಪೂರ್ಣಚಂದ್ರರ ಫೋನ್ ಬಂತು. 'ಸಾರ್, ನೆನ್ನೆ ನೀವು ನನಗೆ ಫೋನ್ ಮಾಡಿದಾಗ ದಸರಾ ಸಿನಿಮಾ ಫೆಸ್ಟಿವೆಲ್‌ನಲ್ಲಿ ನನ್ನ ನಿರ್ದೇಶನದ ಪುಟ್ಟಣ್ಣನ ಕತ್ತೆ ಸಿನಿಮಾದ ಸಂವಾದ ಕಾರ್ಯಕ್ರಮದಲ್ಲಿ ಬಿಸಿಯಾಗಿದ್ದೆ ಎಂದರು. ಕೂಡಲೇ ನಾನೀಗ ಮೈಸೂರಿಗೆ ಬರುತ್ತಿದ್ದೇನೆ ಎಂದೆ. ಹೌದ! ಹಾಗಾದರೆ ಮಾಲ್ ಆಫ್ ಮೈಸೂರ್ ಶಾಪಿಂಗ್ ಕಾಂಪ್ಲೆಕ್ಸ್‌ನ ಐನಾಕ್ಸ್‌ನಲ್ಲಿ ಸಂಜೆ ನಾಲ್ಕು ಗಂಟೆಗೆ ಈ ಪಾದ ಪುಣ್ಯಪಾದ ಸಿನಿಮಾ ಪ್ರದರ್ಶನವಿದೆ ಬನ್ನಿ, ನಿಮ ಮೈಸೂರು ಮಿತ್ರರಿಗೂ ಹೇಳಿ.. ಎಂದರು.

ಒಂದಿಷ್ಟು ಕವಿಸಾಹಿತಿ ಮಿತ್ರರ ನೆನಪಾಗಿ ಧೇರ್ಯ ರಾಮಕುಮಾರ್, ಕಾಳಿಹುಂಡಿ ಶಿವು, ಎಂಜಿಆರ್ ಆರಸ್, ಹನ್ನಾಳು ಗೋವಿಂದೇಗೌಡರು, ಎಸ್.ಎಸ್.ಪುಟ್ಟೇಗೌಡರು ಪ್ರಕಾಶಕರು ಓಂಕಾರಪ್ಪ ಹೀಗೆ ಮೈಸೂರು ಮಂದಿಗೆ ಫೋನಾಯಿಸುತ್ತಾ ಹೋದೆ. ಮೈಸೂರು ತಲುಪುವಷ್ಟರಲ್ಲಿ ಪುಟ್ಟೇಗೌಡರು ಮಾತ್ರ ಒಟ್ಟಿಗಾದರು. ನಮ ನಾಲ್ಕು ಪಾದಗಳು ನಾಲ್ಕು ಏರೋಲಿಫ್ಟ್ ಮೇಲೆ ಸಾಗಿ ಈ ಪಾದ ಪುಣ್ಯ ಪಾದ ನೋಡಲು ಸೀಟ್‌ನಲ್ಲಿ ಸೆಟಲ್ ಆದವು. ಸಿನಿಮಾ ಕಥಾ ನಾಯಕನ ಪಾದ ಪುಣ್ಯದಾಗಿರಲಿಲ್ಲ ಪಾಪದಿಂದ ಕೂಡಿತ್ತು. ನಾನು ಆನೆಕಾಲು ರೋಗದ ಹೆಸರು ಕೇಳಿದ್ದೆ. ಆದರೆ ಈ ರೋಗ ಸೊಳ್ಳೆಗಳು ಕಚ್ಚಿ ಬರುತ್ತದೆ ಎಂಬ ವಿಚಾರ ತಿಳಿದಿರಲಿಲ್ಲ. ನಿರ್ದೇಶಕ ಪೂರ್ಣಚಂದ್ರ ಎಷ್ಟೊಂದು ಪರಿಪೂರ್ಣವಾಗಿ ಹಳ್ಳಿ ಬದುಕಿನ ನೈಜ ಚಿತ್ರಣವನ್ನು ನಾಜೂಕಾಗಿ ಒಂದು ಸೊಗಸಾದ ಸಿನಿಮಾವಾಗಿಸಿದ್ದಾರಲ್ಲಾ ಎನಿಸಿತು. ಆನೆಕಾಲು ರೋಗಕ್ಕೆ ತುತ್ತಾದ ಡ್ರೈವರೊಬ್ಬ ತನ್ನ ತಮ್ಮ ತಂಗಿ ಅಷ್ಟೇ ಏಕೆ ಸ್ವತ: ಪತ್ನಿಯಿಂದ ತಿರಸ್ಕೃತನಾಗಿ ನೋವು ಅನುಭವಿಸುವ ಕಥೆ ಅತ್ಯಂತ ಘನ ಘೋರ! ಇದನ್ನು ತೋರಿಸುತ್ತಲೇ ಒಬ್ಬ ವೈದ್ಯೆಯ ಟಾನಿಕ್‌ನಂತಹ ಸಾಂತ್ವನದ ನುಡಿ, ಆಕೆಯ ಮಾನವೀಯ ನಡೆ






ಅಸಹಾಯಕ ಸ್ಥಿತಿಯಲ್ಲಿ ತೊಳಲಾಡುವ ವ್ಯಕ್ತಿ ತನ್ನ ರೋಗಿಷ್ಟ ಪಾದದ ನೋವಿನಲ್ಲೇ ತನ್ನ ಬದುಕನ್ನು ಮತ್ತೇ ಸರಿಪಡಿಸಿಕೊಳ್ಳುವ ಪಾದದ ನಡೆ ಇದೆಯೆಲ್ಲಾ ಅದೇ ಆತಸ್ಥೈರ್ಯ. ಆ ನಡೆ ಇಲ್ಲಿ ನಾಟಕೀಯವಾಗಿ ಕಾಣುವುದೇ ಇಲ್ಲ. ಸಿನಿಮಾ ಗೆಲ್ಲುವುದೇ ಇಲ್ಲಿ. ಸಿನಿಮಾದ ಕೇಂದ್ರ ಬಿಂದು ನಮ ಪಾದ. ಈ ಪಾದವನ್ನು ನಮ ಬದುಕಿನಲ್ಲಿ ಸಂಸ್ಕೃತಿಯಲ್ಲಿ ನಾನಾ ವಿಧದಲ್ಲಿ ಅರ್ಥೈಸಬಹುದು. ನಾವು ಸ್ವಶಕ್ತಿಯಿಂದ ಎದ್ದು ನಿಲ್ಲಲು ಪಾದ ಬೇಕಷ್ಟೇ! ಮಾನವ ಬದುಕಿನ ಆಧಾರ ಪಾದ. ನಾವು ನಮ ತಂದೆ–ತಾಯಿ ಗುರುಹಿರಿಯರಿಗೆ ಪಾದ ಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆಯುತ್ತೇವೆ. ಮನೆಗೆ ಹೊಸದಾಗಿ ಬರುವ ಧರ್ಮಪತ್ನಿ ಬಲಗಾಲಿಟ್ಟು ಬರಲೆಂದು ಆಕೆಯಿಂದ ತುಂಬಿದ ಮನೆ ಶ್ರೇಯೋಭಿವೃದ್ಧಿಯಾಗಲೆಂದು ನಾವು ಬಯಸುತ್ತೇವೆ. ಇದು ನಮ್ಮ ಸಂಸ್ಕೃತಿ ಆಚ–ಾರ ನಂಬಿಕೆ. ಈ ಪಾದವೇ ರೋಗಗ್ರಸ್ಥವಾಗಿ ಸಮಾಜದ ಮನಸ್ಥಿತಿಯೂ ರೋಗಗ್ರಸ್ತವಾದರೇ ರೋಗಿಯ ಪಾಡೇನು? ತಮ್ಮ ತಂಗಿಯ–ರಿಗೆ ಅಸಹ್ಯ ಹುಟ್ಟಿಸಿದ ಈ ಪಾದವನ್ನೇ ಪುಣ್ಯಪಾದವನ್ನಾಗಿಸುವಲ್ಲಿ ನಿರ್ದೇಶಕರ ಜಾಣೆಯ ಕಥೆ ನಾಜೂಕಾಗಿ ತೆರೆದುಕೊಳ್ಳುತ್ತದೆ. ಎಲ್ಲೂ ಆಡಂಬರ ಉತ್ಪ್ರೇಕ್ಷ ಇಲ್ಲದೆ ಹಳ್ಳಿಯ ಬದುಕು. ಅಲ್ಲಿಯ ತಿಪ್ಪೆ ಚರಂಡಿ ಗಲೀಜು, ಸೊಳ್ಳೆಗಳ ಕಡಿತಕ್ಕೆ ಡೆಂಗಿ ಜ್ವರ, ಮಲೇರಿಯಾ ಹರಡುವ ಎಚ್ಚರಿಕೆ ಆದರೆ ಇಲ್ಲಿ ಆನೆಕಾಲು ರೋಗಕ್ಕೆ ತುತ್ತಾದ ದಿನೇಶ ಹಳ್ಳಿಗಳಲ್ಲಿ ಕಾಣಸಿಗುವ ಗಾರೆಯಿಲ್ಲದ ಗೋಡೆ ಮನೆಯ ಜಗುಲಿಯಲ್ಲಿ ಅಸಹಾಯಕನಾಗಿ ಕುಳಿತಲ್ಲಿಂದ ಕಥೆ ಆರಂಭವಾಗುತ್ತದೆ. ಈ ಹಳ್ಳಿಗೆ ಆರೋಗ್ಯ ವೀಕ್ಷಣೆಗೆ ಬರುವ ವೈದ್ಯೆಗೆ ಈತನ ವಿಚಾರ ತಿಳಿದು ಆತನನ್ನು ಭೇಟಿಯಾಗಿ ಮಾನವೀಯ ನೆಲೆಯಲ್ಲಿ ನೆರವಾಗಲು ಸಿದ್ಧಳಾಗುತ್ತಾಳೆ. ಇತ್ತ ಗಂಡನನ್ನು ತೊರೆದ ಹೆಂಡತಿ ಡೈವೋರ್ಸ್ ಕೊಡಲು ಹೊರಟರೆ, ತಂಗಿಯ ಮದುವೆಗೆ ಅಣ್ಣನು ಬರಬಾರದೆಂದು ತಂಗಿ ತಮ್ಮನೇ ನಿಷ್ಠೂರವಾಗಿ ವರ್ತಿಸುವಲ್ಲಿ ಆ ಜೀವ ಎಷ್ಟು ನೊಂದಿರಬೇಡ. ಆದರೆ ಮಾನವೀಯ ಮೌಲ್ಯಗಳ ಗುಣನಡತೆಯ ವೈದ್ಯೆ ಆ ಜೀವಕ್ಕೆ ಆತವಿಶ್ವಾಸ ತುಂಬುತ್ತಾಳೆ. ಕಡೆಗೆ ತನ್ನ ಟ್ಯಾಕ್ಟರ್ ಕೀಯನ್ನೇ ಅವನಿಗೆ ಕೊಟ್ಟು ಅದನ್ನು ಓಡಿಸು ನಿನ್ನ ಬದುಕಿಗೆ ಅದೇ ನಿನ್ನ ಪಾದವೇ ದಾರಿ ತೋರಿಸುತ್ತದೆ ಎಂಬ ನಡೆನುಡಿ ಇದೆಯೆಲ್ಲಾ ಅದೇ ಅಲ್ಲವೇ ಸಾರ್ಥಕ್ಯ ಪುಣ್ಯಪಾದ! ಗಂಡ ಬಿಟ್ಟವಳನ್ನು ಕಟ್ಟಿಕೊಳ್ಳುವೆನೆಂದು ಸುಳ್ಳಿನ ಜಾಲದಲ್ಲಿ ಅವಳ ಶೀಲ ಕೆಡಿಸಲು ಹವಣಿಸುವ ಲಾಯರ್‌ನ ನಡೆ ಮತ್ತು ಟಿವಿ ಧಾರಾವಾಹಿ ನಿರ್ದೇಶಕನನ್ನು ಪ್ರೀತಿಸುತ್ತಿದ್ದ ಇದೇ ವೈದ್ಯೆ ಪರಿಚಯಿಸುವ ನಟಿಯನ್ನೇ ಡೈರೆಕ್ಟರ್ ಮದುವೆಯಾಗಿ ವೈದ್ಯೆಗೆ ಮೋಸ ಮಾಡುವ ಕ್ಯಾರೆಕ್ಟರ್ ಮತ್ತೊಂದು ಕಡೆ ವಿಭಿನ್ನ ನೆಲೆಯಲ್ಲಿ ವಿಮರ್ಶೆಗೆ ಒಳಪಡುತ್ತವೆ. ಕಡೆಗೆ ಇದೇ ವೈದ್ಯೆ ಮನೆಯಲ್ಲಿ ಬಿದ್ದು ತನ್ನೆರಡು ಕಾಲಿಗೆ ಪ್ಲಾಸ್ಟರ್ ಹಾಕಿ ಆಸ್ಪತ್ರೆಯ ಬೆಡ್‌ನಲ್ಲಿ ಮಲಗಿರುವ ದೃಶ್ಯ ಮತ್ತು ಸನ್ಯಾಸಿಯ ಮರಗಾಲು ಪಾದ ಹಿಡಿದು ದೇವರ ಮೊರೆ ಹೋಗಲು ಬೆಟ್ಟ ಹತ್ತುವ ದಿನೇಶ ಈ ದೃಶ್ಯ ನಮ ಜೀವನದ ಏಳುಬೀಳುಗಳ ಸಂಕೇತವಾಗಿ ಬಿಂಬಿಸಿದೆ. ಕಡಗೂ ಒಂದಾಗುವ ದಂಪತಿಗಳು ಸೊಳ್ಳೆಗಳಿಂದ ರಕ್ಷಣೆಗೆ ಜನಜಾಗೃತಿ ಮೂಡಿಸಲು ಸೊಳ್ಳೆ ಬ್ಯಾಟ್ ಮತ್ತು ಪರದೆ ಉಚಿತವಾಗಿ ವಿತರಿಸುವಲ್ಲಿಗೆ ಆರೋಗ್ಯ ಸಂರಕ್ಷಣೆ ಹೆಲ್ತ್ ಫಾರ್ ನೇಷನ್ಸ್ ಸಂದೇಶದೊಂದಿಗೆ ಮುಕ್ತಾಯವಾಗುತ್ತದೆ. ಚಿತ್ರದ ಕಲಾವಿದರಲ್ಲಿ ಆಟೋ ನಾಗರಾಜ್ (ಕಥಾ ನಾಯಕ ದಿನೇಶ್), ವ್ಯೋಮಿ ಸಾಕೆಲ್(ಚೈತ್ರ) (ವೈದ್ಯೆ–ಲಾಲಿತ್ಯ) ತಮ್ಮ ತಮ್ಮ ಪಾತ್ರಗಳ ವಿಶಿಷ್ಟ ಗುಣ ಲಕ್ಷಣಗಳಿಂದ ಪ್ರೇಕ್ಷಕರಿಗೂ ಇಷ್ಟವಾಗಿದ್ದು ಸಂವಾದದಲ್ಲಿ ಗೋಚರಿಸಿತು. ಕೆಲವು ವೈದ್ಯರು ಚಿತ್ರವನ್ನು ಪ್ರಶಂಸಿಸಿದ್ದು ಗಮನಾರ್ಹ.

ಚಿತ್ರದ ಉಳಿದ ಪ್ರಮುಖ ಕಲಾವಿದರು ರಶ್ಮಿ, ಮನೋಜ್, ಬೇಬಿ ರಿಧಿ, ಹರೀಶ್ ಕುಂದೂರ್, ಪ್ರಮೀಳಾ ಸುಬ್ರಮಣ್ಯ, ಬಲರಾಜವಾಡಿ. ಛಾಯಾಗ್ರಾಹಕರು ರಾಜು ಹೆಮಿಗೇಪುರ, ಹಿನ್ನೆಲೆ ಸಂಗೀತ ಅನಂತ್ ಆರ್ಯನ್. ಸಂಕಲನ: ದೀಪು ಸಿ.ಎಸ್. ನಿರ್ಮಾಣ ಪೂರ್ಣಚಂದ್ರ ಫಿಲಂಸ್. ಕಥೆ, ಚಿತ್ರಕತೆ, ಸಂಭಾಷಣೆ, ನಿರ್ದೇಶನ ಸಿದ್ದು ಪೂರ್ಣಚಂದ್ರ.

–ಗೊರೂರು ಅನಂತರಾಜು, ಹಾಸನ

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248